ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಸ್ವಾಮಿ, ನಾನು ಈಗಾಗಲೇ ಹೇಳಿದ್ದೇನೆ. ಇದಕ್ಕೆ ವಿಶ್ವಬ್ಯಾಂಕಿನ ನೆರವು ಸಿಕ್ಕಿದೆ. ಅಂತರಾಷ್ಟ್ರೀಯ ಸ್ಕೀಮಿನವರು ಇದು ಎಷ್ಟರಮಟ್ಟಿಗೆ ಫೀಸಿಬಿಲಿಟಿ ಇದೆ ಎಂಬುದನ್ನು ತೀರ್ಮಾನಿಸಿದ ಮೇಲೆ ಅದನ್ನು ಕಾರ್ಯಗತ ಮಾಡಬೇಕು. ಪಂಳೆಯ ಸಾಂದ್ರತೆಯನ್ನು ಕೂಡ ನೋಡಬೇಕಾಗುತ್ತದೆ. ಈ ಯೋಜನೆಯನ್ನು ಕಾರ್ಯಗತ ಮಾಡಲಿಕ್ಕೆ ಏನೂ ಅಡ್ಡಿ ಇಲ್ಲ.

ಶ್ರೀ ಕೆ.ಬಿ. ಪುಲ್ಲಪ್ಪ.—ಫೀಸಿಬಿಲಿಟಿ ಸಾಧ್ಯವೋ ಅಸಾಧ್ಯವೋ ಎಂದು ನೋಡದೆ ೨೧೦ ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದೆಯೇ ಸ್ವಾಮಿ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನಮ್ಮ ಸರ್ಕಾರ ಈ ಯೋಜನೆಯನ್ನು ಸಣ್ಣ ನೀರಾವರಿ ಯೋಜನೆ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ಮಾಡಿತ್ತು. ಇದಕ್ಕೆ ಈಗ ವಿಶ್ವಬ್ಯಾಂಕಿನ ನೆರವು ಸಿಕ್ಕಿದೆ. ಇದನ್ನು ಈಗ ಅಂತರಾಷ್ಟ್ರೀಯ ಸಮಿತಿಯವರು ಪರಿಶೀಲನೆ ಮಾಡಬೇಕಾಗಿದೆ. ಅವರು ಪರಿಶೀಲನೆ ಮಾಡಿ ತೀರ್ಮಾನ ಮಾಡಿದಮೇಲೆ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಬಿ. ಶಿವಯ್ಯ.—ಫೀಸಿಬಿಲಿಟಿ ಪರೀಕ್ಷೆ ಯಾವಾಗ ಮುಗಿಯುತ್ತೆ ? ಇದರ ಬಗ್ಗೆ ಸರ್ಕಾರ ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಆದಷ್ಟುಬೇಗ ಪರಿಶೀಲನೆ ಮಾಡಿ ಈ ಯೋಜನೆಯನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಆರ್. ರಾಜುಗೌಡ.—ಸಣ್ಣ ನೀರಾವರಿ ಯೋಜನೆ ಇಲಾಖೆಯ ನಿಯಮಗಳಿಗೂ ವಿಶ್ವ ಬ್ಯಾಂಕಿನ ನಿಯಮಗಳಿಗೂ ವ್ಯತ್ಯಾಸ ಏನು ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ವಿಶ್ವಬ್ಯಾಂಕ್ ನೆರವುಕೊಡುವುದರಿಂದ, ಈ ಯೋಜನೆ ಎಷ್ಟರಮಟ್ಟಿಗೆ ಲಾಭವಾಗುತ್ತದೆ? ಮಳೆಯ ಸಾಂದ್ರತೆ ಏನು ಎಲ್ಲವನ್ನು ನೋಡುತ್ತಾರೆ.

ಅಧ್ಯಕ್ಷರು.—ವಿಶ್ವ ಬ್ಯಾಂಕಿನ ನಿಯಮಗಳೇನು ? ನಿಮ್ಮ ಇಲಾಖೆಯ ನಿಯಮಗಳೇನು ? ಅಂತ ಕೇಳುತ್ತಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನನಗೆ ಸ್ವಲ್ಪ ಕಾಲಾವಕಾಶ ಬೇಕು.

Budget amount allotted to the Forest Department in Bellary District.

260 SRI M. RAMAPPA (Kurugodu).—Will the Minister for Forest and Mines and Geology be pleased to state:—

(a) the Budget amount allotted to the Forest Department to grow forest in Bellary District during the last 3 years.

(b) number of trees planted during the last 3 years in the District and the No. of trees survived.

(c) the amount utilised for the above purpose and the amount unspent for the last 3 years?

SRI G. MADEGOWDA (Minister for Forest and Mines and Geology).

(a) Budget allotted to Bellary District.—

a 1977-78 Rs. 18,05,000-00
b 1978-79 Rs. 23,32,000-00
c 1979-80 Rs. 28,24,000-00

(b) Trees planted		Trees survived
1977-78	28,17,895 nos	18,31,631 nos
1978-79	6,85,875 nos	5,14,406 nos
1979-80	20,72,545 nos	16,58,036 nos

(c)	Amount utilised	Amount unspent
1977–78	15,98,817–31	2,06,182–69
1978–79	23,15,479–18	16,520–82
1979–80	28,56,115–95	—

ಶ್ರೀ ಎಂ. ರಾಮಪ್ಪ.—ಡ್ಯಾಂಗಳಲ್ಲಿ ಬರತಕ್ಕ ಮಣ್ಣನ್ನು ತಡೆಯಲಿಕ್ಕಾಗಿ ಏನು ಗಿಡಗಳನ್ನು ಬೆಳೆಸುತ್ತೀರಿ ? ಇದಕ್ಕಾಗಿ ಪ್ರತ್ಯೇಕವಾಗಿ ಬಜೆಟ್ ಅಲಾಟ್ ಮಾಡಿದ್ದೀರಾ ?

† ಶ್ರೀ ಜಿ. ಮಾದೇಗೌಡ.—ಇದಕ್ಕೋಸ್ಕರ ಬೇರೆ ಬಜೆಟ್ ಇಲ್ಲ.

ಶ್ರೀ ಎಂ. ರಾಮಪ್ಪ.—ಡ್ಯಾಂನಲ್ಲಿ ಬರತಕ್ಕ ಮಣ್ಣನ್ನು ನಿಲ್ಲಿಸುವುದಕ್ಕೆ ಡ್ಯಾಂ ದಡದಲ್ಲಿ ಗಿಡ ಗಳನ್ನು ನೆಡುತ್ತಿದ್ದಾರೆ. ಇದಕ್ಕಾಗಿ ಪ್ರತ್ಯೇಕವಾದ ಬಜೆಟ್ ಇದೆಯೇ ?

ಶ್ರೀ ಜಿ. ಮಾದೇಗೌಡ.—ಇಲ್ಲ.

ಶ್ರೀ ಎಂ. ರಾಮಪ್ಪ.—ಈಗ ಏನಾದರೂ ಮಾಡುತ್ತೀರಾ ?

ಶ್ರೀ ಜಿ. ಮಾದೇಗೌಡ.—ಕೆರೆಗಳಲ್ಲಿ ಮಣ್ಣು ಮುಚ್ಚುವುದನ್ನು ತಡೆಯುವುದಕ್ಕೆ ಪ್ರತ್ಯೇಕವಾದ ಬಜೆಟ್ ಮಾಡಿಕೊಂಡಿಲ್ಲ. ಮಾಡಬೇಕಾದಂತ ಯೋಜನೆ ಕೂಡ ಸರ್ಕಾರದ ಮುಂದೆ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರದಲ್ಲಿ ಆಶ್ಚರ್ಯಕರ ವಾದ ವಿಷಯ ಇದೆ. ೧೯೭೭-೭೮ರಲ್ಲಿ ೨೮ ಲಕ್ಷ ಗಿಡಗಳನ್ನು ನೆಡುವುದಕ್ಕೆ ೧೮ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ೧೯೭೯-೮೦ರಲ್ಲಿ ೨೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೨೩ ಲಕ್ಷ ಗಿಡಗಳನ್ನು ನೆಟ್ಟಿದ್ದಾರೆ. ಆದರೆ, ೧೯೭೮-೭೯ರಲ್ಲಿ ೨೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೬ ಲಕ್ಷ ಗಿಡಗಳನ್ನು ನೆಟ್ಟಿದ್ದಾರೆ. ಅಂದರೆ, ಈ ವರ್ಷದಲ್ಲಿ ಒಂದು ಗಿಡಕ್ಕೆ ೪ ರೂಪಾಯಿ ಖರ್ಚು ಮಾಡಿದ್ದಾರೆ. ೭೭-೭೮ ಹಾಗೂ ೭೯-೮೦ರಲ್ಲಿ ಒಂದು ಗಿಡಕ್ಕೆ ಒಂದು ಮುಕ್ಕಾಲು ರೂಪಾಯಿ ಬಿದ್ದಿದೆ. ಇಷ್ಟೊಂದು ಹಣ ಖರ್ಚಾಗಬೇಕಾದರೆ ಟ್ರೆಂಚ್ ಎಲ್ಲಿ ಹೊಡೆದರು ?

ಶ್ರೀ ಜಿ. ಮಾದೇಗೌಡ.—ಟ್ರಾಕ್ಟರ್‌ನಲ್ಲಿ ಟ್ರೆಂಚ್ ಹೊಡೆಸಿರುತ್ತೇವೆ. ಮಳೆ ಬೀಳದೇ ಇದ್ದರೆ ಪ್ಲಾಂಟೇಷನ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಟ್ರೆಂಚ್ ಹೊಡೆದಿರುವುದೇ ಬೇರೆ ಕಡೆ. ಗಿಡ ನೆಟ್ಟಿರುವುದೇ ಬೇರೆ ಕಡೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳ ವಿವರಣೆ ತೃಪ್ತಿಕರವಾಗಿಲ್ಲ. ಪ್ರಶ್ನೆಗೆ ಸಂಬಂಧಪಟ್ಟ ವಿವರಗಳು ಕೂಡ ಇಲ್ಲ. ಇದು ಪರಿಶೀಲನೆಗೆ ಯೋಗ್ಯವಾಗಿರುವುದರಿಂದ ಪರಿಶೀಲನೆ ಮಾಡುವ ಭರವಸೆ ಕೊಡುತ್ತೀರಾ ? ಊಹೆ ಮಾಡಿ ಉತ್ತರ ಹೇಳುತ್ತಿದ್ದೀರಿ, ಇದು ಸರಿಯಲ್ಲ.

ಅಧ್ಯಕ್ಷರು.—೭೯ರ ಟ್ರೆಂಚ್ ಆಗಿರುವುದರಿಂದ ಊಹೆ ಮಾಡುತ್ತಿದ್ದಾರೆ. ಈಗಿನ ಟ್ರೆಂಚ್ ಆಗಿದ್ದರೆ ಉತ್ತರ ಹೇಳುತ್ತಿದ್ದರು.

ಶ್ರೀ ಜಿ. ಮಾದೇಗೌಡ.—ಪರಿಶೀಲನೆ ಮಾಡಿಯೇ ಉತ್ತರ ಕೊಟ್ಟಿರುವುದು. ಅಧಿಕಾರಿಗಳು ಸರ್ಕಾರಕ್ಕೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ಸದಸ್ಯರ ತೃಪ್ತಿಗೋಸ್ಕರ ಇನ್ನೊಂದು ಸಾರಿ ಪರಿ ಶೀಲನೆ ಮಾಡಿಸುತ್ತೇನೆ.

ಶ್ರೀ ಎಂ. ಗಂಗಣ್ಣ.—ಸ್ವಾಮಿ, ಇರತಕ್ಕ ಹಣವನ್ನು ಖರ್ಚು ಮಾಡದೇ ಇರತಕ್ಕ ಅಧಿಕಾರಿಗಳು ಇದ್ದಾರೆ, ಇವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜಿ. ಮಾದೇಗೌಡ.—ಒಂದು ವರ್ಷ ಮಾತ್ರ ಕೇಂದ್ರ ಸರ್ಕಾರದಿಂದ ಬಂದಿದ್ದ ಹಣ ಮಾತ್ರ ಉಳಿದಿತ್ತು. ಅದು ಸುಮಾರು ಎರಡು ಲಕ್ಷ ರೂಪಾಯಿ. ನದಿಗಳ ದಡದಲ್ಲಿ ಗಿಡ ನೆಡುವುದಕ್ಕಾಗಿ ಕೊಟ್ಟಿದ್ದ ಹಣ, ಅದನ್ನು ತಿಳಿಸುತ್ತೇವೆಂದು ಹೇಳಿದ್ದರು. ಅವರು ತಿಳಿಸುವ ಹೊತ್ತಿಗೆ ವರ್ಷ ಮುಗಿದು ಹೋಗಿತ್ತು, ಇನ್ನು ಯಾವ ವರ್ಷದಲ್ಲಿಯೂ ಹಣ ಉಳಿದಿಲ್ಲ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ಟ್ರೆಂಚ್ ತೆಗೆಯಲಿಕ್ಕೆ ಕಂಟ್ರಾಕ್ಟ್ ಕೊಡುತ್ತೀರಿ. ಸಂಬಂಧಿಸಿದವರಿಗೆ ಕೊಡುತ್ತೀರೋ, ಬೇರೆಯವರಿಗೆ ಕೊಡುತ್ತೀರೋ ?

ಶ್ರೀ ಜಿ. ಮಾದೇಗೌಡ.—ಟೆಂಡರ್ ಕಾಲ್ ಮಾಡುತ್ತೇವೆ. ಸರ್ಕಾರದ ರೇಟ್ ಪ್ರಕಾರ ತೋಡಿಸುತ್ತೇವೆ. ರಾಮಪ್ಪನವರು ಕಳಂಹಿಸಿ ಕೊಟ್ಟರೆ ಅವರಿಗೂ ಕೊಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ.—೧೯೭೭-೭೮ರಲ್ಲಿ ೨೮ ಲಕ್ಷ ಗಿಡಗಳು, ೧೯೭೮-೭೯ರಲ್ಲಿ ೬ ಲಕ್ಷ ಗಿಡಗಳಂ ಮತ್ತು ೧೯೭೯-೮೦ರಲ್ಲಿ ೨೦ ಲಕ್ಷ ಗಿಡಗಳನ್ನು ನೆಡುತ್ತೇವೆಂದು ಹೇಳಿದ್ದೀರಿ. ಪ್ರಕೃತಿಯ ಸಮತೋಲನ ದೃಷ್ಟಿಯಿಂದ ಕಾಡನ್ನು ಬೆಳೆಸುತ್ತಾ ಇದ್ದೀರಿ, ಆದರೆ, ಯೂಕಲಿಪ್ಟ್ ಅಂದರೆ ನೀಲಗಿರಿ ಸಸಿಗಳನ್ನು ೯೯ ಭಾಗ ೧೦೦ ಭಾಗ ಅಂದರೂ ತಪ್ಪಾಗಲಾರದು. ಅವುಗಳನ್ನೇ ಹಾಕಿ ೧೦ ವರ್ಷಗಳಲ್ಲಿ ಕಡಿದು ಭೂಮಿಯನ್ನು ಬಂಜರು ಮಾಡಲಾಗುತ್ತದೆ. ನೀಲಗಿರಿ ಸಸಿಗಳನ್ನು ಬಿಟ್ಟು ಬೇರೆ ಬೇರೆ ಜಾತಿಯ ಯಾವ ಯಾವ ಗಿಡಗಳನ್ನು ಹಾಕಿದ್ದೀರಿ ? ಕಾಡಿನ ಸಮತೋಲನ ದೃಷ್ಟಿಯಿಂದ ಇದು ಸರಿಯೇ ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ, ನೀಲಗಿರಿ ಸಸಿಗಳನ್ನು ಪೆಚ್ಚಾಗಿ ನೆಡುಸುತ್ತಿದ್ದೇವೆ. ಮಾನ್ಯ ಸದಸ್ಯರ ಕುತೂಹಲವನ್ನು ಅರ್ಥಮಾಡಿಕೊಂಡಿದ್ದೇನೆ. ನೀಲಗಿರಿ ಸಸಿಗಳು ಬೇರೆ ಸಸಿಗಳಿಗಿಂತ ಬೇಗ ಬರುತ್ತವೆ. ೮-೧೦ ವರ್ಷಗಳಲ್ಲಿ ಬರುತ್ತವೆ. ಅಭಾವವನ್ನು ನೀಗಿಸುವ ಸಲುವಾಗಿ ಬೇರೆ ಸಸಿಗಳನ್ನು ನೆಡುತ್ತಿದ್ದೇವೆ. ಮಾನ್ಯ ಸದಸ್ಯರ ಅಭಿಪ್ರಾಯದಂತೆ ಬೇರೆ ಸಸಿಗಳನ್ನು ಅಂದರೆ ಮಾವು, ಇಪ್ಪೆ ಇಂತಹ ಸಸಿಗಳನ್ನು ನೆಟ್ಟರೂ ಕೂಡ ನೀಲಗಿರಿ ಸಸಿಗಳಿಗಿಂತ ಹೆಚ್ಚು ಫಲಕಾರಿ ಇರುವುದಿಲ್ಲ. ಆದಕ್ಕೋಸ್ಕರ ನೀಲಗಿರಿ ಸಸಿಗಳನ್ನು ನೆಡುತ್ತಿದ್ದೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಮಂತ್ರಿಗಳು ತಮ್ಮ ಉತ್ತರದಲ್ಲಿ ವೇಗವಾಗಿ ಬರುತ್ತವೆ ಎಂದು ಹೇಳಿದ್ದೀರಿ, ತಮ್ಮ ವೇಗ ಜನಗಳ ಅಗತ್ಯವೋ ಅಥವಾ ಹರಿಹರ ಫಾಲಿಫೈಬರ್ಸ್‌ನ ಅಗತ್ಯವೋ ಅದನ್ನು ತಿಳಿಸುತ್ತೀರಾ ?

ಅಧ್ಯಕ್ಷರು.—ಮುಂದಿನ ಪ್ರಶ್ನೆ. ಶ್ರೀ ಎಂ.ಎಸ್. ಆತ್ಮಾನಂದ್.

Under Ground Drainage Scheme to Mandya City

441. SRI M. S. ATHMANANDA (Mandya).—Will the Minister for Housing and Urban Development be pleased to state:—

(a) whether the Government has sanctioned Under Ground Drainage Scheme to Mandya City;

(b) if so, the total cost of the project;

(c) when will the scheme be implemented ?

SRI DHARMSINGH NARAYANSINGH (Minister for Housing and Urban Development).—

(a) Yes.

(b) The Original cost of the scheme was Rs. 68 lakhs, and the revised cost is Rs. 132 lakhs.

(c) The Scheme is expected to be completed by 1982 subject to timely and sufficient flow of funds.

ಶ್ರೀ ಎಂ.ಎಸ್. ಆತ್ಮಾನಂದ್.—ಈ ಯೋಜನೆ ಯಾವಾಗ ಮಂಜೂರು ಆಗಿದೆ. ಈವರೆಗೆ ಒಳಚರಂಡಿ ಯೋಜನೆಯಲ್ಲಿ ಎಷ್ಟು ಕೆಲಸ ನಡೆದಿದೆ ತಿಳಿಸುತ್ತೀರಾ ?

† ಶ್ರೀ ಧರ್ಮಸಿಂಗ್.—ಅಡ್ಮಿನಿಸ್ಟ್ರೇಟೀವ್ ಅಪ್ರೂವ್ ೧೬-೫-೮೦ರಲ್ಲಿ, ಟೆಕ್ನಿಕಲ್ ಅಪ್ರೂವ್ ೩೦-೫-೮೦ರಲ್ಲಿ ಆಗಿದೆ, ಈವರೆಗೆ ೫ ಲಕ್ಷ ೩೮ ಸಾವಿರ ರೂಪಾಯಿಗಳನ್ನು ಈ ಯೋಜನೆಗೋಸ್ಕರ ಖರ್ಚು ಮಾಡಲಾಗಿದೆ.